**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ. ನರಸೀಪುರ.**

**ಸಿ ಸಿ ಸಂಖ್ಯೆ: 474/2025**

**ದೋಷಾರೋಪಣೆ**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ತಿ. ನರಸೀಪುರ ಆದ ನಾನು

1. ಸಚಿನ್ ಹೆಚ್ ಆರ್ ಬಿನ್ ರಮೇಶ ಹೆಚ್ ಎಂ
   29 ವರ್ಷ,.

2. ರಮೇಶ ಹೆಚ್ ಎಂ ಬಿನ್ ಡಿ ಮಾದೇಗೌಡ
   62 ವರ್ಷ.

3. ಪದ್ಮ ಕೋಂ ಹೆಚ್ ಎಂ ರಮೇಶ
   50 ವರ್ಷ.

4. ದರ್ಶನ್ ಹೆಚ್ ಆರ್ ಬಿನ್ ರಮೇಶ ಹೆಚ್ ಎಂ
   27 ವರ್ಷ.

5. ಕೃಷ್ಣೆಗೌಡ ಬಿನ್ ಎ ಜೆ ಕೆಂಪೇಗೌಡ
   52 ವರ್ಷ.

6. ಹರೀಶ್ ಬಿನ್ ಲೇ ಸಿದ್ದೇಗೌಡ
   41 ವರ್ಷ.

   ಎಲ್ಲರ ವಾಸಃ ಹೆಗ್ಗೂರು ಗ್ರಾಮ,
   ಬನ್ನೂರು ಹೋಬಳಿ, ತಿ ನರಸೀಪುರ ತಾಲ್ಲೂಕು,
   ಮೈಸೂರು ಜಿಲ್ಲೆ.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪವೇನೆಂದರೆ :-

ಮೊದಲನೆಯದಾಗಿ, ಮೈಸೂರು ಜಿಲ್ಲಾ ಮಹಿಳಾ ಪೊಲೀಸ್ ಠಾಣಾ ವ್ಯಾಪ್ತಿಯ ತಿ. ನರಸೀಪುರ ತಾಲ್ಲೂಕಿನ ಬನ್ನೂರು ಪಟ್ಟಣದ ಚಾಸಾ-1/ಸಹನಾ ರವರ ಜೊತೆ 1ನೇ ಆರೋಪಿತರಾದ ನಿಮ್ಮ ವಿವಾಹವು ದಿನಾಂಕ 04.12.2020 ರಂದು ಆಗಿದ್ದು, ವಿವಾಹದ ಪೂರ್ವದಲ್ಲಿ ಆರೋಪಿತರಾದ ನೀವು ಚಾಸಾ-1 ರವರ ಕಡೆಯಿಂದ ವರದಕ್ಷಿಣೆಯಾಗಿ 100 ಗ್ರಾಂ ಚಿನ್ನ, 400 ಗ್ರಾಂ ಬೆಳ್ಳಿ ಮತ್ತು ರೂ.6,00,000-00 ನಗದು ಹಣ ಕೊಡುವಂತೆ, ವಿವಾಹದ ನಂತರ ಆರೋಪಿತರಾದ ನೀವು ಚಾಸಾ-1 ರವರಿಗೆ 10.00 ಲಕ್ಷ ನಗದು ಮತ್ತು 300 ಗ್ರಾಂ ಚಿನ್ನದ ಒಡವೆಗಳನ್ನು ವರದಕ್ಷಿಣೆಯಾಗಿ ತರುವಂತೆ ಒತ್ತಾಯ ಮಾಡುವ ಮೂಲಕ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ 3 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೇಯದಾಗಿ, ಆರೋಪಿತರಾದ ನೀವು ವಿವಾಹದ ವೇಳೆಗೆ ಚಾಸಾ-1 ರವರ ಕಡೆಯಿಂದ ವರದಕ್ಷಿಣೆಯಾಗಿ 100ಗ್ರಾಂ ಚಿನ್ನ, 400 ಗ್ರಾಂ ಬೆಳ್ಳಿ ಮತ್ತು ನಗದು ಹಣ ರೂ.6,00,000/- ವನ್ನು ಪಡೆಯುವ ಮೂಲಕ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ 4 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೂರನೇಯದಾಗಿ, ಆರೋಪಿತರಾದ ನೀವು ಈ ಮೇಲೆ ಹೇಳಿದ ವರದಕ್ಷಿಣೆಯನ್ನು ಚಾಸಾ-1 ರವರಿಗೆ ವಾಪಸ್ಸು ನೀಡದೆ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ 6 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾಲ್ಕನೇಯದಾಗಿ, ಆರೋಪಿತರಾದ ನಿಮ್ಮ ಮನೆಯಲ್ಲಿ ವಿವಾಹವಾದ 1 ತಿಂಗಳ ನಂತರ, ಸಮಾನ ಉದ್ದೇಶದಿಂದ, ನೀವು ಚಾಸಾ-1 ರವರ ಜೊತೆ ವಿನಾಃ ಕಾರಣ ಜಗಳ ಮಾಡಿ, ಅವರನ್ನು ಉದ್ದೇಶಿಸಿ, "ನಿನ್ನ ಬದಲು ಬೇರೆಯವರನ್ನು ಮದುವೆಯಾಗಬೇಕಿತ್ತು, ಹೆಚ್ಚಿನ ವರದಕ್ಷಿಣೆ ಸಿಗುತ್ತಿತ್ತು, ನಮಗೆ ರೂ.10.00 ಲಕ್ಷ ನಗದು ಹಣ ಮತ್ತು 300 ಗ್ರಾಂ ಚಿನ್ನದ ಒಡವೆಗಳನ್ನು ವರದಕ್ಷಿಣೆಯಾಗಿ ತರಬೇಕು" ಎಂದು ಹೇಳಿ, ದಿನಾಂಕ 10.04.2024 ರಂದು ಬೆಳಗ್ಗೆ 11.00 ಗಂಟೆಗೆ ಆರೋಪಿತರಾದ ನಿಮ್ಮ ಮನೆಯಲ್ಲಿ ನೀವು ಚಾಸಾ-1 ಮತ್ತು 3/ಪುಷ್ಪಲತಾ ರವರ ಮೇಲೆ ತೀಟೆ ಜಗಳ ತೆಗೆದು, ಚಾಸಾ-1 ರವರನ್ನು ಉದ್ದೇಶಿಸಿ, "ಬೇವರ್ಸಿ ಮುಂಡೆ, ಲೋಫರ್ ಮುಂಡೆ" ಎಂಬ ಅವ್ಯಾಚ್ಯ ಶಬ್ದಗಳಿಂದ ಬೈದು, "ನೀನು ಇಲ್ಲಿಯೆ ಇದ್ದರೆ ಬದುಕಲು ಬಿಡುವುದಿಲ್ಲ, ನಿನ್ನನ್ನು ಕೊಲೆ ಮಾಡುತ್ತೇವೆ" ಎಂದು ಹೇಳಿ, ನಿಮ್ಮ ಕೈಗಳಿಂದ ಚಾಸಾ-1 ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯ ಪಡಿಸಿ, ಆ ಮೂಲಕ ಆಕೆಗೆ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡುವ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.85 ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಐದನೇಯದಾಗಿ, ಈ ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, ಆರೋಪಿತರಾದ ನೀವು ಈ ಮೇಲೆ ಹೇಳಿದಂತೆ ಚಾಸಾ-1 ರವರಿಗೆ ಅವ್ಯಾಚ್ಯ

ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿ ಭಂಗಪಡಿಸುವ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.352 ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಆರನೇಯದಾಗಿ, ಈ ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, ಆರೋಪಿತರಾದ ನೀವು ಈ ಮೇಲೆ ಹೇಳಿದಂತೆ ಚಾಸಾ-1 ರವರಿಗೆ ಮತ್ತು ನಿಮ್ಮ ಕೈಗಳಿಂದ ಚಾಸಾ-3 ರವರ ಮೈಕೈಗೆ ಹೊಡೆದು, ಅವರಿಗೆ ಸಾಮಾನ್ಯ ಸ್ವರೂಪದ ಗಾಯ ಪಡಿಸುವ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.115(2) ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಏಳನೇಯದಾಗಿ, ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, ಆರೋಪಿತರಾದ ನೀವು ಚಾಸಾ-1 ರವರಿಗೆ ಈ ಮೇಲೆ ಹೇಳಿದಂತೆ ಪ್ರಾಣ ಬೆದರಿಕೆ ಉಂಟು ಮಾಡುವ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.351(2)(3) ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎಂಟನೇಯದಾಗಿ, ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, 5 ಮತ್ತು 6ನೇ ಆರೋಪಿತರಾದ ನೀವು ಈ ಮೇಲೆ ಹೇಳಿದಂತ ಕೃತ್ಯವನ್ನು ಚಾಸಾ-1 ರವರ ಮೇಲೆ ಮಾಡಲು ಉಳಿದ ಆರೋಪಿತರಿಗೆ ಕುಮ್ಮಕ್ಕು ನೀಡುವ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.54 ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ದಿನಾಂಕಃ 07.03.2026.

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ತಿ. ನರಸೀಪುರ.**

**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ. ನರಸೀಪುರ.**

**ಸಿ ಸಿ ಸಂಖ್ಯೆ: 474/2025**

**ದೋಷಾರೋಪಣೆ**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ತಿ. ನರಸೀಪುರ ಆದ ನಾನು

1. ಸಚಿನ್ ಹೆಚ್ ಆರ್ ಬಿನ್ ರಮೇಶ ಹೆಚ್ ಎಂ
   29 ವರ್ಷ,.

2. ರಮೇಶ ಹೆಚ್ ಎಂ ಬಿನ್ ಡಿ ಮಾದೇಗೌಡ
   62 ವರ್ಷ.

3. ಪದ್ಮ ಕೋಂ ಹೆಚ್ ಎಂ ರಮೇಶ
   50 ವರ್ಷ.

4. ದರ್ಶನ್ ಹೆಚ್ ಆರ್ ಬಿನ್ ರಮೇಶ ಹೆಚ್ ಎಂ
   27 ವರ್ಷ.

5. ಕೃಷ್ಣೆಗೌಡ ಬಿನ್ ಎ ಜೆ ಕೆಂಪೇಗೌಡ
   52 ವರ್ಷ.

6. ಹರೀಶ್ ಬಿನ್ ಲೇ ಸಿದ್ದೇಗೌಡ
   41 ವರ್ಷ.
   ಎಲ್ಲರ ವಾಸಃ ಹೆಗ್ಗೂರು ಗ್ರಾಮ,
   ಬನ್ನೂರು ಹೋಬಳಿ, ತಿ ನರಸೀಪುರ ತಾಲ್ಲೂಕು,
   ಮೈಸೂರು ಜಿಲ್ಲೆ.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ ಹೌದು

ಪ್ರಶ್ನೆಃ ನೀವು ಸದರಿ ದೋಷಾರೋಪವನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ ವಿಚಾರಣೆಯಾಗಬೇಕು.

(ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕಃ 07.03.2026

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಟಿ ನರಸೀಪುರ.**